[ಗೊಂದಲ]

ಅಧ್ಯಕ್ಷರು:– ಶೂನ್ಯ ವೇಳೆಯಲ್ಲಿ ಉಪ ಪ್ರಶ್ನೆಗಳನ್ನು ಕೇಳಿದಂತೆ ಎಲ್ಲರೂ ಕೇಳಿದರೆ ಹೇಗೆ? ವಿರೋಧ ಪಕ್ಷದ ನಾಯಕರೆ, ತಮ್ಮದೇನಿದೆ ಹೇಳಿ.

(5) ವಿಷಯ:– ಕೊಡಗು ಜಿಲ್ಲೆಯ ಜಮ್ಮಾ ಮತ್ತು ಬಾಣೆ ವಿಷಯವಾಗಿ ಸರ್ಕಾರ ಹೊರಡಿಸಿದ ಸುತ್ತೋಲೆಗಳನ್ನು ವಾಪಸ್ ಪಡೆಯುವ ಬಗ್ಗೆ ನೀಡಲಾದ ಭರವಸೆಯನ್ನು ಕಾರ್ಯಗತಗೊಳಿಸದಿರುವ ಬಗ್ಗೆ.

ಶ್ರೀ ಧರ್ಮಸಿಂಗ್ [ವಿರೋಧ ಪಕ್ಷದ ನಾಯಕರು]:– ಮಾನ್ಯ ಅಧ್ಯಕ್ಷರೆ, ನಾಳೆ ಅಧಿವೇಶನದ ಕೊನೆಯ ದಿನವಾಗಿದೆ. ಕೊಡಗು ಜಿಲ್ಲೆಯ ಜಮ್ಮಾ ಮತ್ತು ಬಾಣೆ ವಿಷಯವಾಗಿ ಹೊರಡಿಸಲಾಗಿರುವ ಸುತ್ತೋಲೆಗಳೆಲ್ಲವನ್ನೂ ವಾಪಸ್ ತೆಗೆದುಕೊಳ್ಳುವುದಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಇನ್ನೂ ಕೂಡ ಯಾವ ಸುತ್ತೋಲೆಗಳನ್ನೂ ವಾಪಸ್ ತೆಗೆದುಕೊಂಡಿಲ್ಲ. ಕಂದಾಯ ಇಲಾಖೆಗೆ ಸಂಬಂದಪಟ್ಟದ್ದು ಆಗಲಿ, ಅರಣ್ಯ ಇಲಾಖೆಗೆ ಸಂಬಂಧಪಟ್ಟದ್ದು ಆಗಲಿ, ಯಾವ ಸುತ್ತೋಲೆಯನ್ನೂ ಸಹ ಇದುವರೆವಿಗೂ ವಾಪಸ್ ತೆಗೆದುಕೊಂಡಿಲ್ಲ, ಏಕೆ? ಸದನದಲ್ಲಿ ಚರ್ಚೆಯಾಗಿ 10 ದಿವಸಗಳಾಯಿತು. ತಮ್ಮ ಎದುರುಗಡೆಯೇ ಚರ್ಚೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಸುತ್ತೋಲೆಗಳನ್ನೂ ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ಇನ್ನೂ ತೆಗೆದುಕೊಂಡಿಲ್ಲ. ಮಾನ್ಯ ಎಂ.ಪಿ.ಪ್ರಕಾಶ್‌ರವರು ಇಲ್ಲೇ ಇದ್ದಾರೆ. ಇದಕ್ಕೆ ಸರ್ಕಾರ ಸ್ಪಷ್ಟವಾದಂತಹ ಉತ್ತರವನ್ನು ಕೊಡಲೇಬೇಕು. It is the question of credibility of the Government. ಸರ್ಕಾರ ಭರವಸೆ ಕೊಟ್ಟಂತೆ ನಡೆದುಕೊಳ್ಳಲೇಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರು:– ಮಾನ್ಯ ಸಚಿವರು ಏನು ಹೇಳುತ್ತಾರೋ ನೋಡೋಣ. ಅವರು ಉತ್ತರ ಹೇಳುವುದಕ್ಕೆ ಅವಕಾಶ ಕೊಡದೆ ಮಾತನಾಡಲಿಕ್ಕೆ ನೀವು ಎದ್ದು ನಿಂತರೆ ಹೇಗೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಕೊಟ್ಟಂತಹ ಉತ್ತರಕ್ಕೂ ಸಹಿತ ಅಧಿಕಾರಿಗಳು ಬೆಲೆ ಕೊಡದಿದ್ದರೆ ಹೇಗೆ?

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಅಧ್ಯಕ್ಷರೆ, ಇದುವರೆಗೂ ಈ ವಿಚಾರದಲ್ಲಿ ಕ್ರಮ ಆಗಿಲ್ಲ. ಜನ ಅಲ್ಲಿ ಇದಕ್ಕೋಸ್ಕರ ಕಾಯುತ್ತಿದ್ದಾರೆ. ದಯವಿಟ್ಟು ಅದರ ಬಗ್ಗೆ ತಾವು ಸ್ಪಷ್ಟವಾದಂತಹ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್:– ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರ ಬಹಳ ಸ್ಪಷ್ಟವಾದ ನೀತಿಯನ್ನು ಅನುಸರಿಸಿ, ಆ ಮೂರು ಸುತ್ತೋಲೆಗಳನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಎಂಬುದಾಗಿ ಘೋಷಣೆ ಮಾಡಿದ್ದೇವೆ. ಈ ದಿಸೆಯಲ್ಲಿ ವಿಳಂಬವಾಗಿದೆ. ಸರ್ಕಾರದಲ್ಲಿದ್ದೇವೆ ಎಂದ ತಕ್ಷಣವೇ ಎಲ್ಲವನ್ನೂ ಸಮರ್ಥಿಸಿಕೊಳ್ಳಲಿಕ್ಕೆ ನಾನು ತಯಾರಿಲ್ಲ. ಮಾನ್ಯ ಕಂದಾಯ ಸಚಿವರು ಪ್ರವಾಹ ಪರಿಹಾರದ ವಿಚಾರದಲ್ಲಿ ಪ್ರವಾಸದಲ್ಲಿದ್ದಾರೆ, ಅವರು ಹುಬ್ಬಳ್ಳಿಯಿಂದ ಇನ್ನೂ ಬಂದಿಲ್ಲ. ಗೋಡೆ ಕುಸಿದು ಮೃತರಾದಂತಹವರ ಕುಟುಂಬಕ್ಕೆ ಸಾಂತ್ವನ ನೀಡಲಿಕ್ಕೆ ಅವರು ಹೋಗಿದ್ದಾರೆ. ಇವತ್ತೇ ನಾನು ಮುಖ್ಯ ಕಾರ್ಯದರ್ಶಿಗಳ ಜೊತೆಗೆ ಮಾತನಾಡಿ, ಅದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲಿಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಸಮಿತಿಯೊಂದನ್ನು ಮಾಡುತ್ತೇವೆಂದು ಹೇಳಿದ್ದರು.

ಶ್ರೀ ಎಂ.ಪಿ.ಪ್ರಕಾಶ್:– ಆ ವಿಚಾರ ಬೇರೆ.

ಅಧ್ಯಕ್ಷರು:– ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಜಮ್ಮಾ ಮತ್ತು ಬಾಣೆಯದ್ದರ ಬಗ್ಗೆ ಇಂದೇ ಮಾತನಾಡುತ್ತೇನೆಂದು ಅವರು ಹೇಳಿದ್ದಾರೆ.

[ಗೊಂದಲ]

ಎಲ್ಲರಿಗೂ ನಂತರ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ. ಈಗ ಅಂಜನಮೂರ್ತಿಯವರೆ, ತಮ್ಮ ವಿಷಯ ಪ್ರಸ್ತಾಪಿಸಿ.

(6) ವಿಷಯ:– 'ಸುವರ್ಣ ಗ್ರಾಮ' ಯೋಜನೆಯ ಗ್ರಾಮಗಳ ಆಯ್ಕೆಯಲ್ಲಿ ತಾರತಮ್ಯವಾಗಿದ್ದನ್ನು ಸರಿಪಡಿಸುವ ಭರವಸೆ ಕೊಟ್ಟಿದ್ದು ಈಡೇರದ ಬಗ್ಗೆ.

ಶ್ರೀ ಆಂಜನಮೂರ್ತಿ [ನೆಲಮಂಗಲ]:– ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಕರ್ನಾಟಕ ರಾಜ್ಯದಲ್ಲಿ ಸುವರ್ಣ ಗ್ರಾಮ ಯೋಜನೆಯ ಗ್ರಾಮಗಳ ಆಯ್ಕೆ ಬಗ್ಗೆ ಇಡೀ ಸದನ ಒಕ್ಕೊರಲಿನಿಂದ ಪಕ್ಷಾತೀತವಾಗಿ ಸನ್ಮಾನ್ಯ ಪಂಚಾಯತ್ ರಾಜ್ ಸಚಿವರನ್ನು ಒತ್ತಾಯ ಮಾಡಿತ್ತು. ಈ ಸುವರ್ಣ ಗ್ರಾಮವನ್ನು ಯಾವ ರೀತಿ ಆಯ್ಕೆ ಮಾಡುತ್ತಿದ್ದೀರಿ? ಸ್ಥಳೀಯ ಶಾಸಕರನ್ನು ಕೇಳುತ್ತಿದ್ದೀರಾ? ಎಂದು ಕೇಳಿದಾಗ, ಅದಕ್ಕೆ ಪೂರಕವಾಗಿ ಸನ್ಮಾನ್ಯ ಮಾಧುಸ್ವಾಮಿಯವರೂ ಸಹ ಸ್ಪಷ್ಟೀಕರಣವನ್ನು ಮಾನ್ಯ ಸಚಿವರಿಂದ ಕೇಳಿದರು. ಮಾನ್ಯ ಸಚಿವರು ಆ ದಿನ ಕೆಲವು ಮುಖಂಡರ, ಕೆಲವು ಕಾರ್ಯಕರ್ತರು ಕೊಟ್ಟಿದ್ದ ಬೇಡಿಕೆ ಮೇರೆಗೆ ನಾವು ಸುವರ್ಣ ಗ್ರಾಮವನ್ನು ಆಯ್ಕೆ ಮಾಡಿದ್ದೇವೆ ಎಂದು ಹೇಳಿದರು. ಆ ದಿನ ಪ್ರತಿಯೊಬ್ಬ ಗೌರವಾನ್ವಿತ ಸದಸ್ಯರು, ಇದು ನ್ಯಾಯ ಸಮ್ಮತವಲ್ಲ, ನಿಮ್ಮ ಆಯ್ಕೆ ಸರಿಯಾದುದಲ್ಲವೆಂದು ಒಕ್ಕೊರಲಿನಿಂದ ಒತ್ತಾಯ ಮಾಡಿದಾಗ, ತಾವೂ ಸಹ ಅದಕ್ಕೆ ಧ್ವನಗೂಡಿಸಿದಿರಿ ಎಂಬುದು ನನ್ನ ಭಾವನೆ. ಆಗ ಮಾನ್ಯ ಸಚಿವರು ಇನ್ನು ಮುಂದೆ, ಅಂದರೆ ಈಗೇನು ನಾವು ಆಯ್ಕೆ ಮಾಡಿದ್ದೇವೋ, ಅದನ್ನು ಬದಲಾಯಿಸುವುದಕ್ಕೆ ಸಂಬಂಧಪಟ್ಟಂತಹ ಶಾಸಕರು ಮನವಿ ಪತ್ರ ಕೊಟ್ಟರೆ ಅದನ್ನು ಮಾಡುತ್ತೇನೆ, ಅದನ್ನು ಬದಲಾಯಿಸಿ ಅವರ ಮನವಿ ಪ್ರಕಾರವೇ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಅದೇ ದಿನ ನನ್ನ ಮತ ಕ್ಷೇತ್ರದಲ್ಲಿ ಆಯ್ಕೆಯಾಗಿದ್ದಂತಹ ಗ್ರಾಮ ಸಂಪೂರ್ಣವಾಗಿ ಎಲ್ಲಾ ರೀತಿಯಲ್ಲಿ ಅಭಿವೃದ್ಧಿಯಾಗಿದೆ, ಅದು ಬೇಕಾಗಿಲ್ಲ, ಮತ್ತೊಂದು ಗ್ರಾಮವನ್ನು ಮಾಡಿ ಎಂದು ಖುದ್ದಾಗಿ ನಾನು ಅವರಿಗೊಂದು ಮನವಿಯನ್ನು ಕೊಟ್ಟೆ. ಅದರ ಬಗ್ಗೆ ಇದುವರೆಗೂ ಯಾವುದೇ ನಿರ್ಧಾರವಾಗಿಲ್ಲ. ತಮ್ಮ ಮೂಲಕ ನಾನು ಸರ್ಕಾರದ ಸಚಿವರಿಗೆ ಕೇಳಲು ಇಚ್ಛೆ ಪಡುವುದೇನೆಂದರೆ, ಶಾಸಕರು ಕೊಡತಕ್ಕಂಥ ಮನವಿಗೆ ಸರ್ಕಾರದವರು ಮನ್ನಣೆ ಕೊಡುವುದಿಲ್ಲವೇ?